**ಕರ್ನಾಟಕ ಅರಣ್ಯ ಇಲಾಖೆ**

ಕ್ರ.ಸಂ. ಡಿ1/ಭೂಮಿ/ರಾಚವಿ/ಎಫ್‌ಸಿ/2016–17 1450

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ,
ಬೆಳಗಾವಿ ವಿಭಾಗ, ಬೆಳಗಾವಿ,
ದಿನಾಂಕ: 15 –07–2016.

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
ಬೆಳಗಾವಿ ವೃತ್ತ, ಬೆಳಗಾವಿ.

ಮಾನ್ಯರೇ,

ವಿಷಯ: Diversion of Forest Land for the use of Post Graduate Centre of Karnataka University, Campus Belagavi.

ಉಲ್ಲೇಖ:1. ಕುಲಸಚಿವರು, ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ, ಬೆಳಗಾವಿ ಇವರ ಪತ್ರ ಸಂಖ್ಯೆ: ರಾಚವಿಬೆ/ಕುಸಕಾ/2015–16/5060, ದಿನಾಂಕ: 0502–2016

2. ವಲಯ ಅರಣ್ಯ ಅಧಿಕಾರಿ, ಕಾಕತಿ ಇವರ ವರದಿ ದಿನಾಂಕ: 28–04–2016
3. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ಇವರ ವದಿ ದಿನಾಂಕ: 29–04–2016
4. ಸ್ಥಳ ಪರಿಶೀಲನಾ ದಿನಾಂಕ: 4–4–2016
5. ಈ ಕಚೇರಿ ಪತ್ರ ಸಂಖ್ಯೆ: ಡಿ1/ಭೂಮಿ/ಎಫ್‌ಸಿ/ಕಾತವಿ/2015–16/4990 ದಿನಾಂಕ: 02–03–2016 ಮತ್ತು ದಿನಾಂಕ: 21–03–2016.
6. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಖಾನಾಪೂರ ಇವರ ವರದಿ ದಿನಾಂಕ:30–4–2016, 24–6–2016 ಹಾಗೂ 2–7–2016
7. ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಪತ್ರ ಸಂಖ್ಯೆ: ಕಂಶಾ/ಎಲ್‌ಎನ್‌ಡಿ/ಸಿಆರ್–618/2000–01, ದಿನಾಂಕ: 28–6–2016.

***

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಪತ್ರಗಳನುಸಾರ ತಮ್ಮಲ್ಲಿ ವರದಿ ಸಲ್ಲಿಸುವುದೇನೆಂದರೆ, ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ ಭೂತರಾಮನಹಟ್ಟಿ, ಬೆಳಗಾವಿ ಇವರು ಸ್ನಾತಕೋತರ ಕೇಂದ್ರ ಸ್ಥಾಪಿಸುವ ಕುರಿತು ಜಿಲ್ಲಾಧಿಕಾರಿಗಳು, ಬೆಳಗಾವಿ ಇವರು ಅವರ ಆದೇಶ ಸಂಖ್ಯೆ: ಆರ್‌ಡಿ/ಎಲ್‌ಬಿಪಿ/ಸಿಆರ್–98/89–90, ದಿನಾಂಕ: 15–03–1990ರಡಿ ಭೂತರಾಮನಹಟ್ಟಿ ಅ.ಸ.ನಂ. 1/1 ರಲ್ಲಿನ 178 ಎಕರೆ 14 ಗುಂಟೆ ಜಮೀನನ್ನು ಗೋಮಾಳ/ಗೈರಾನ ಜಮೀನು ಎಂದು ಪರಿಗಣಿಸಿ ಮಂಜೂರು ಮಾಡಿರುತ್ತಾರೆ. ( ಪ್ರತಿ ಲಗತ್ತಿಸಿದೆ) ಸಧ್ಯ ಕುಲಸಚಿವರು, ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ, ಬೆಳಗಾವಿ ಇವರು ಉಲ್ಲೇಖ(1)ರಡಿ ಪೂರ್ಣ ಪ್ರಮಾಣದ ಪ್ರಸ್ತಾವನೆಯನ್ನು 1980ರ ಅರಣ್ಯ ಸಂರಕ್ಷಣೆ ಕಾಯ್ದೆಯಡಿ ಅರಣ್ಯ ಭೂಮಿಯನ್ನು ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ, ಬೆಳಗಾವಿ ಇವರ ಹೆಸರಿಗೆ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಇದು ತುಂಬಾ ಹಳೆಯ ಪ್ರಕರಣವಿದ್ದು ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಉಲ್ಲಂಘನೆಯಾಗಿದ್ದು, ಇಲಾಖೆಯಿಂದ ಎಫ್.ಐ.ಆರ್. ದಾಖಲಿಸಲಾಗಿರುತ್ತದೆ.

ಸದರಿ ಬಿಡುಗಡೆ ಮಾಡಲಾಗುವ 178 ಎಕರೆ 14 ಗುಂಟೆ ಜಮೀನಿಗೆ ಪರ್ಯಾಯವಾಗಿ ಜಿಲ್ಲಾಧಿಕಾರಿ, ಬೆಳಗಾವಿ ಇವರು ಅರಣ್ಯ ಇಲಾಖೆಗೆ ಅವರ ಪತ್ರ ಸಂಖ್ಯೆ: ಆರ್‌ಬಿ/ಎಲ್‌ಎನ್‌ಡಿ/ಸಿಆರ್–618/2000–01, ದಿನಾಂಕ: 24–04–2002 ರಡಿ ಖಾನಾಪೂರ ತಾಲ್ಲೂಕಿನ ಖಾನಾಪೂರ ಮತ್ತು ಕಣಕುಂಬಿ ವಲಯಗಳಡಿ ಬರುವ ಪಾರವಾಡ, ಗವಸೆ, ಕಾಲಮನಿ, ಹಾಗೂ ಉಚವಡೆ ಈ ಗ್ರಾಮಗಳಲ್ಲಿನ ಕಂದಾಯ ಜಮೀನನ್ನು ಬಿಡುಗಡೆ ಮಾಡಿರುತ್ತಾರೆ. ಸದರಿ ಬಿಡುಗಡೆ ಮಾಡಲಾದ ಕಂದಾಯ ಜಮೀನು ನೆಡುತೋಪು ಬೆಳೆಸಲು ಯೋಗ್ಯವಿರುವ ಬಗ್ಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಖಾನಾಪೂರರವರಿಂದ ವರದಿ ಕೇಳಲಾಗಿ ಅರಣ್ಯ ಜಮೀನಿನ ಬದಲಾಗಿ ಬಿಡುಗಡೆ ಮಾಡಲಾದ ಕಂದಾಯ ಜಮೀನು 178 ಎಕರೆ 14 ಗುಂಟೆ ಪೈಕಿ ಕೇವಲ 139 ಎಕರೆ 24 ಗುಂಟೆ ಜಮೀನು ಮಾತ್ರ ನೆಡುತೋಪು ಬೆಳೆಸಲು ಯೋಗ್ಯವಿದ್ದು ಇನ್ನುಳಿದ 38 ಎಕರೆ 30 ಗುಂಟೆ ಕಂದಾಯ ಜಮೀನು ಅತಿಕ್ರಮಣಗೊಂಡಿದ್ದು ಸದರಿ ಸ್ಥಳವು ನೆಡುತೋಪು ಬೆಳೆಸಲು ಯೋಗ್ಯವಿರುವುದಿಲ್ಲವೆಂದು ಪ್ರಮಾಣ ಪತ್ರ ನೀಡಿರುತ್ತಾರೆ.

ಮುಂದುವರೆದು ಸದರಿ ಅತಿಕ್ರಮಣಗೊಂಡ ಜಮೀನಿಗೆ ಬದಲಾಗಿ ಪರ್ಯಾಯ ಹಾಗೂ ನೆಡುತೋಪು ಬೆಳೆಸಲು ಯೋಗ್ಯವಿರುವ 38 ಎಕರೆ 30 ಗುಂಟೆ ಕಂದಾಯ ಜಮೀನನ್ನು ಅರಣ್ಯ ಇಲಾಖೆಗೆ ಕೂಡಲೇ ಹಸ್ತಾಂತರಿಸುವಂತೆ ಉಲ್ಲೇಖ(5)ರ ಈ ಕಚೇರಿ ಪತ್ರಗಳಡಿ ಜಿಲ್ಲಾಧಿಕಾರಿಗಳನ್ನು ಹಾಗೂ ಉಪ ವಿಭಾಗಾಧಿಕಾರಿ, ಬೆಳಗಾವಿ ಇವರುಗಳನ್ನು ಕೋರಲಾಗಿತ್ತು. ಅದರಂತೆ ಜಿಲ್ಲಾಧಿಕಾರಿ, ಬೆಳಗಾವಿ ಇವರು ಅಗತ್ಯವಿರುವ ಹಾಗೂ ಪರ್ಯಾಯ 38ಎ 30 ಗುಂ ಕಂದಾಯ ಜಮೀನನ್ನು ಉಲ್ಲೇಖ(7)ರ ಪತ್ರದಡಿ ಅರಣ್ಯ ಇಲಾಖೆಗೆ ನೀಡಲು ಆದೇಶ ಮಾಡಿರುತ್ತಾರೆ. ಸದರಿ ಬಿಡುಗಡೆ ಮಾಡಲಾದ ಕಂದಾಯ ಜಮೀನಿನ ಉಪಯುಕ್ತತೆ ಬಗ್ಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಖಾನಾಪೂರ ಹಾಗೂ ವಲಯ ಅರಣ್ಯ ಅಧಿಕಾರಿ, ಕಣಕುಂಬಿ ಇವರು ಜಂಟಿಯಾಗಿ ಪರಿಶೀಲಿಸಿ, ಹಸ್ತಾಂತರಗೊಳ್ಳುವ ಕಂದಾಯ ಜಮೀನು ಖಾನಾಪೂರ ತಾಲ್ಲೂಕಿನ ಕಣಕುಂಬಿ ವಲಯದಲ್ಲಿನ ಅಮಟೆ ರಿ.ಸ.ನಂ. 30 ಹಾಗೂ 123ರಲ್ಲಿರುವ 38 ಎಕರೆ 30 ಗುಂಟೆ ಪ್ರದೇಶವು ಅತಿಕ್ರಮಣದಿಂದ ಮುಕ್ತವಿದ್ದು ನೆಡುತೋಪು ಬೆಳೆಸಲು ಯೋಗ್ಯವಿರುತ್ತವೆ ಎಂದು ಅಭಿಪ್ರಾಯದ ವರದಿ ನೀಡಿರುತ್ತಾರೆ ಸದರ ಕಂದಾಯ ಭೂಮಿಯ ಮೇಲೆ ಯಾವುದೇ ರೀತಿಯ ಹಕ್ಕುಗಳು ಇರುವ ಬಗ್ಗೆ ಕೇಂದ್ರ ಸರ್ಕಾರದ ಅರಣ್ಯ ಪರಿಸರ ಇಲಾಖೆಯಿಂದ 03–08–2009ರ ಮೇರೆಗೆ ಹೊರಡಿಸಿದ ನಿಯಮಾವಳಿಗಳ ಪ್ರಕಾರ ನಿಗಧಿಪಡಿಸಿದ ನಮೂನೆ–1 ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರು ಪತ್ರ ನೀಡಿರುತ್ತಾರೆ. ಸದರ ಪ್ರಸ್ತಾಪಿತ ಅರಣ್ಯ ಭೂಮಿಯು ಶೈಕ್ಷಣಿಕವಾಗಿ ಅವಶ್ಯವಿರುವುದರಿಂದ ಮತ್ತು ಇದು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಠಿಯಿಂದ 178 ಎಕರೆ 14 ಗುಂಟೆ ಅರಣ್ಯ ಭೂಮಿಯನ್ನು ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡಲು ಶಿಫಾರಸ್ಸು ಮಾಡುತ್ತಾ, ಮುಂದಿನ ಕ್ರಮಕ್ಕಾಗಿ ಕ್ರಮಕ್ಕಾಗಿ ಗೌರವಪೂರ್ವಕ ಸಲ್ಲಿಸಲಾಗಿದೆ.

**ಲಗತ್ತು: ಪ್ರಸ್ತಾವನೆ 7 ಪ್ರತಿಗಳಲ್ಲಿ**

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಳಗಾವಿ ವಿಭಾಗ, ಬೆಳಗಾವಿ.

**ಪ್ರತಿಯನ್ನು**

1) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರುರವರಿಗೆ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಲಾಗಿದೆ.
2) ಮಾನ್ಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಬೆಂಗಳೂರುರವರಿಗೆ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಲಾಗಿದೆ.
3) ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಮಾಹಿತಿಗಾಗಿ ಅಭಿನಂದನೆಗಳೊಂದಿಗೆ ಕಳುಹಿಸಿದೆ.
4) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ಉಪವಿಭಾಗ, ಬೆಳಗಾವಿ ಹಾಗೂ ವಲಯ ಅರಣ್ಯ ಅಧಿಕಾರಿ, ಕಾಕತಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವಿಭಾಗ, ಬೆಳಗಾವಿ.

13/7/16